**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ**
**ತಿಪಟೂರು**

**ಸಿ.ಸಿ ನಂ. 6164/2021**

ಚಾಸಾಃ 1
ಫ್ರಾಸಾಃ 1

**ದಿನಾಂಕಃ 05-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಶ್ರೀನಿವಾಸ್ |
| ತಂದೆಯ/ಗಂಡನ ಹೆಸರು | ಃ | ಮೇಲುಗಿರಿಯಪ್ಪ |
| ವಯಸ್ಸು | ಃ | 42 ವರ್ಷ |
| ಉದ್ಯೋಗ | ಃ | ವ್ಯಾಪಾರ |
| ವಾಸ ಸ್ಥಳ | ಃ | ಬಿದರೆಕಾವಲು |

**ಮುಖ್ಯ ವಿಚಾರಣೆ ಎಪಿಪಿಯವರಿಂದಃ**

1 ನೇ ಆರೋಪಿ ನನಗೆ ಪರಿಚಯ 2 ನೇ ಆರೋಪಿ ನನಗೆ ಪರಿಚಯ ಇಲ್ಲ. ಚಾಸಾ-2 ರವರು ನನಗೆ ಗೊತ್ತು ಅವರು ನಮ್ಮ ಪಕ್ಕದ ಮನೆಯವರು. ಚಾಸಾ-3 ರವರು ಚಾಸಾ-2 ರವರ ನೆಂಟರು ಅವರ ಅಂಗಡಿಗೆ ಬಂದು ಹೋಗುತ್ತಿದ್ದರು. ಚಾಸಾ-4 ರವರು ನನಗೆ ಪರಿಚಯ ಇದಾರೆ. ಚಾಸಾ-6 ರವರು ಚಾಸಾ-2 ರವರ ತಮ್ಮ. ಚಾಸಾ-5 ರವರು ಪರಿಚಯ ಇಲ್ಲ. ದಿಃ 30-07-2021 ರಂದು ಬೆಳಗ್ಗೆ 11-45 ಗಂಟೆಗೆ ನಾನು ದಸರೀಘಟ್ಟದಿಂದ ತಿಪಟೂರಿಗೆ ದ್ವಿಚಕ್ರ ವಾಹನದಲ್ಲಿ ನಾನು ಮತ್ತು ಚಾಸಾ-2 ರವರು ಬರುತ್ತಿರುವಾಗ ಮಲದೇವರಪುರದಿಂದ ವೇಗವಾಗಿ ಬಂದು ನನ್ನ ದ್ವಿಚಕ್ರ ವಾಹನಕ್ಕೆ ಗುದ್ದಿರುತ್ತಾರೆ. ನಾನು ಓಡಿಸಿಕೊಂಡಿರುವ ವಾಹನದ ಸಂಖ್ಯೆ ಕೆಎ-17-ಎಸ್-5789 ಆಗಿರುತ್ತದೆ. ನನಗೆ ಗುದ್ದಿರುವ ಟ್ರಾಕ್ಟರ್ ಗೆ ನಂಬರ್ ಇಲ್ಲ ಆದರೆ ಅದರ ಮೇಲೆ ಎ ಎಲ್ ಟಿ ಟ್ರಾಕ್ಟರ್ ಆಗಿರುತ್ತದೆ. ಸದರಿ ಟ್ರಾಕ್ಟರ್ ಜೊತೆ ಟ್ರೈಲರ್ ನಲ್ಲಿ ಮಣ್ಣು ತುಂಬಿಸಿಕೊಂಡು ಬಂದಿತ್ತು. ಟ್ರಾಕ್ಟರ್ ಹಳದಿ ಬಣ್ಣದಲ್ಲಿತ್ತು. 1 ನೇ ಆರೋಪಿಯವರು ನಮ್ಮ ಗಾಡಿಗೆ ಗುದ್ದಿರುವುದರಿಂದ ನಾನು ಚಾಸಾ-2 ರವರು ಕೆಳಗಡೆ ಬಿದ್ದಿರುತ್ತೇವೆ. ನನಗೆ ಎಡಗಾಲಿನ ಮಂಡಿ ಜರುಗಿತ್ತು. ಚಾಸಾ-2 ರವರಿಗೂ ಕೂಡ ಎಡಕಾಲಿನ ಮೂಳೆಯ ಮಂಡಿ ಮುರಿದಿತ್ತು. 1 ನೇ ಆರೋಪಿಯವರು ಟ್ರಾಕ್ಟರನ್ನು ಸೈಡಿಗೆ ಹಾಕುತ್ತೇನೆಂದು ಹೇಳಿ ನಂತರ ಟ್ರಾಕ್ಟರನ್ನು ನಿಲ್ಲಿಸದೆ ಅಲ್ಲಿಂದ ಹೊರಟು ಹೋಗಿರುತ್ತಾರೆ. ಚಾಸಾ-4 ರವರು ನಮ್ಮನ್ನು ಉಪಚರಿಸಿ ಅಲ್ಲಿಂದ ತಿಪಟೂರು ಆಸ್ಪತ್ರೆಗೆ ಸೇರಿಸಿರುತ್ತಾರೆ. ಚಾಸಾ-2 ರವರಿಗೆ

ಜಾಸ್ತಿ ಪೆಟ್ಟಾಗಿರುವ ಕಾರಣದಿಂದ ಹಾಸನ ಆಸ್ಪತ್ರೆಗೆ ಕಳುಹಿಸಿ ಕೊಡಲಾಯಿತು. ನಾನು ಬುಕ್ಕಾಪಟ್ಟಣದಿಂದ ಚಿಕಿತ್ಸೆಯನ್ನು ಪಡೆದುಕೊಂಡ ನಂತರ ದಿ **04-08-2021** ರಂದು ಪೊಲೀಸ್ ಠಾಣೆಗೆ ದೂರನ್ನು ಕೊಟ್ಟಿರುತ್ತೇನೆ. ಸಾಕ್ಷಿ ಸದರಿ ದೂರಿನಲ್ಲಿರುವ ಅವರ ಸಹಿಯನ್ನು ನೋಡಿ ಒಪ್ಪಿರುತ್ತಾರೆ ಅದರಿಂದ ನಿಪಿ-**1** ಮತ್ತು **1**(ಎ) ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

ಪಾಟೀ ಸವಾಲು ಶ್ರೀ ಎಂಕೆವೈ ವಕೀಲರಿಂದಃ

ನಾನು ಬಿದರೆಕಾವಲಿನಿಂದ ಕೆಂಕೆರೆಗೆ ಬಂದು ದಸರೀಘಟ್ಟದಿಂದ ತಿಪಟೂರಿಗೆ ಬರುತ್ತಿದ್ದೆ. ಬಿದರೆಕಾವಲನ್ನು ನಾನು 11-10 ಕ್ಕೆ ಬಿಟ್ಟಿರುತ್ತೇನೆ. ಸದರಿ ಬಿದರೆಕಾವಲಿನಿಂದ ಬಂದರೆ ಕೆಂಕೆರೆ, ಮಾವಿನಕೆರೆ ಅಕ್ಷಯಕಲ್ವ, ಹುಚ್ಚನಹಟ್ಟಿ ಸರ್ಕಲ್ ಹತ್ತಿರ ಬರಬೇಕು ಎಂದರೆ ಸಾಕ್ಷಿ ನಾನು ಮಾಳಿನಕೆರೆ ಊರಿಗೆ ಹೋಗಿರುವುದಿಲ್ಲ. ನಾನು ಅಕ್ಷಯಕಲ್ವದಿಂದ ಹುಚ್ಚನಹಟ್ಟಿ ಸರ್ಕಲ್ ಗೆ ಬಂದಿರುತ್ತೇನೆ ಎಂದರೆ ಸಾಕ್ಷಿ ಬುಧವಾರಸಂತೆ ಗೇಟ್ ಹತ್ತಿರ ಬಂದಿರುತ್ತೇನೆ. ನಾನು ಊರು ಮುಖಾಂತರ ಬರುವಾಗ ಹಲವಾರು ಸರ್ಕಲ್ ಗಳ ಇವೆ ಎಂದರೆ ಸರಿ. ನಾನು ಬರುವಂತಹ ದಾರಿಯಲ್ಲಿ ಚನ್ನರಾಯಪಟ್ಟಣಕ್ಕೆ ಹೋಗುವ ಸರ್ಕಲ್, ಅರಸೀಕೆರೆ -ಗಂಡಸಿಗೆ ಹೋಗುವ ಸರ್ಕಲ್, ನೊಣವಿನಕೆರೆಗೆ ಹೋಗುವ ಸರ್ಕಲ್ ಕೂಡ ಇದೆ ಎಂದರೆ ಸರಿ. ಸದರಿ ಸರ್ಕಲ್ ನಲ್ಲಿ ಮನೆಗಳು ಪೆಟ್ರೋಲ್ ಬಂಕ್ ಗಳು ಮಧ್ಯದ ಅಂಗಡಿಗಳು ಇವೆ ಎಂದರೆ ಸರಿ. ಅಂಗಡಿಗಳು ಆದ ನಂತರ ದಸರೀಘಟ್ಟ ದೇವಸ್ಥಾನ ಇದೆ ಎನ್ನುತ್ತಾರೆ ಅಲ್ಲಿ ಶಾಲೆ ಕೂಡ ಇದೆ ಎಂದರ ಸರಿ. ಸದರಿ ರಸ್ತೆ ಏರುಮುಖವಾಗಿ ಇರುವ ರಸ್ತೆ ಎಂದರೆ ಸರಿ. ದಸರೀಘಟ್ಟದಿಂದ ತಿಪಟೂರಿಗೆ ಬರುವ ರಸ್ತೆ ಇಳಿಮುಖವಾಗಿ ಇದೆ ಎಂದರೆ ಸರಿಯಲ್ಲ. ನಾನು ತಿಪಟೂರಿಗೆ ಮನೆಯನ್ನು ಸರಿ ಮಾಡಬೇಕೆಂದು ಅದಕ್ಕೆ ಕಬ್ಬಿಣವನ್ನು ತಗೊಂಡು ಬರಲು ಬರುತ್ತಿದ್ದೆ. ಕೆಎ-17-ಎಸ್-5789 ನನ್ನ ಹೆಸರಿನಲ್ಲಿ ಇದೆ. ಅದಕ್ಕೆ ಇನ್ ಸೂರೆನ್ಸ್ ಇದೆ ನಾನು ಡಿ ಎಲ್ ಕೂಡ ತಗೊಂಡಿರುತ್ತೇನೆ. ನಾನು ಘಟನೆ ನಡೆಯುವ ಸಮಯದಲ್ಲಿ ಕಾರಿನ ಲೈಸೆನ್ಸ್ ನ್ನು ಹೊಂದಿರುತ್ತೇನೆ. ನಾನು ಡಿಎಲ್ ನ್ನು ತನಿಖಾಧಿಕಾರಿಗೆ ಕೊಟ್ಟಿರುವುದಿಲ್ಲ ಅದನ್ನು ಕೊಡಲು ನನಗೆ ತೊಂದರೆ ಏನೂ ಇಲ್ಲ. ಘಟನೆ ನಡೆದಿರುವ ಸ್ಥಳ ಮಲದೇವರಪುರ ಗೇಟ್. ಸದರಿ ರಸ್ತೆ ಹಲವಾರು ಗ್ರಾಮಗಳಿಗೆ ಹೋಗುವ ರಸ್ತೆ ಎಂದರೆ ಸರಿ. ಗೇಟಿನ ಹತ್ತಿರ ಆರ್ಚ ಇದೆ. ಸದರಿ ರಸ್ತೆಯಲ್ಲಿ ಹಮ್ಸ್ ಗಳು ಇದೆ ಎಂದರೆ ಸರಿಯಲ್ಲ. ನಾನು ಗಮನಿಸಿರುವ ಪ್ರಕಾರ ಮಲದೇವರಪುರ ಗೇಟ್ ಹತ್ತಿರ ಹಮ್ಸ್ ಹಾಕಿರುವುದಿಲ್ಲ. ಮಲದೇವರಪುರಗೇಟಿನಿಂದ ಬರುವಾಗ ಮುಖ್ಯ ರಸ್ತೆಯಿಂದ ಬಲಗಡೆಗೆ ದಸರೀಘಟ್ಟಎಡಗಡೆಗೆ ತಿಪಟೂರು ಕಡೆಗೆ ಬರಬೇಕಾಗಿದೆ ಎಂದರೆ ಸರಿ. ಅಲ್ಲಿ ತಿರುವು ಕೂಡ ಇದೆ ಎಂದರೆ ಸರಿ. ಆಕಡೆ ಈಕಡೆ ಮುಳ್ಳಿನ ಗಿಡಗಳು ಬೆಳೆದುಕೊಂಡಿರುತ್ತವೆ ಎಂದರೆ ಸರಿ. ಮುಳ್ಳಿನ ಗಿಡಗಳು

ಬೆಳೆದಿರುವುದರಿಂದ ಯಾವ ಯಾವ ವಾಹನ ಹೋಗುತ್ತವೆ ಬರುತ್ತವೆ ಎಂದರೆ ಸಾಕ್ಷಿ ಅದನ್ನು ನಾನು ಗಮನಿಸಿರುವುದಿಲ್ಲ ನನ್ನ ಪಾಡಿಗೆ ನಾನು ಬರುತ್ತಿದ್ದೆ ಎನ್ನುತ್ತಾರೆ. ಸದರಿ ರಸ್ತೆಯಲ್ಲಿ ಪ್ರತಿನಿತ್ಯ ಸಾವಿರಾರು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಸದರಿ ರಸ್ತೆಯ ಅಕ್ಕಪಕ್ಕದಲ್ಲಿ ರೈತರುಗಳು ಜಮೀನು, ತೋಟಗಳು ಇವೆ ಎಂದರೆ ಸರಿ. ರೈತರುಗಳು ಸದರಿ ರಸ್ತೆಯನ್ನು ಟ್ರಂಚ್ ನ್ನು ಹೊಡೆದುಕೊಂಡು ಹಾಳು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ಕಾರದಿಂದ ಸದರಿ ರಸ್ತೆಯನ್ನು ಸರಿ ಮಾಡಿಸಲು ಪೈಪ್ ಲೈನ್ ಗಳನ್ನು ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಇರಿಗೇಷನ್ ಡಿಪಾರ್ಟಮೆಂಟ್ ನವರು ಸದರಿ ರಸ್ತೆಯನ್ನು ಮುಚ್ಚಿರುತ್ತಾರೆ ಎಂದರೆ ಸರಿಯಲ್ಲ. ಸದರಿ ರಸ್ತೆಯಲ್ಲಿ ಪ್ಯಾಚ್ ವರ್ಕಗಳು ಮಾಡಿರುತ್ತಾರೆ. ಸದರಿ ರಸ್ತೆಯಲ್ಲಿ ಥೇಂಬರ್ ಕೂಡ ಮಾಡಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ನಾನು ಘಟನೆಯ ದಿನ ಹೆಲ್ಮೆಟ್ಟನ್ನು ಧರಿಸಿರುವುದಿಲ್ಲ. ನಾನು ಮಿನಿಮಮ್ 50 ಸ್ಪೀಡ್ ನಲ್ಲಿ ನನ್ನ ದ್ವಿಚಕ್ರ ವಾಹನವನ್ನು ಓಡಿಸಿಕೊಂಡು ಬಂದಿರುತ್ತೇನೆ ನನ್ನ ದ್ವಿಚಕ್ರ ವಾಹನ ಪೋರ್ ಸ್ಟ್ರೋಕ್ ವಾಹನ. ಟ್ರಾಕರ್ ಮಲದೇವರಪುರದಿಂದ ದಸರೀಘಟ್ಟಕ್ಕೆ ವೇಗವಾಗಿ ಬಂದಿರುತ್ತದೆ. ನಾನು ನನ್ನ ದೂರಿನಲ್ಲಿ ಟ್ರಾಕ್ಟರ್ ನಲ್ಲಿ ಮಣ್ಣು ತುಂಬಿಕೊಂಡು ಬಂದಿರುವ ಬಗ್ಗೆ ನಮೂದು ಮಾಡಿರುತ್ತೇನೆ. ಘಟನೆ ನಡೆದಿತ್ತ ಎನ್ನುವ ಸಮಯಕ್ಕೆ ನನಗೆ ಪ್ರಜ್ಞೆ ತಪ್ಪಿರುವುದಿಲ್ಲ ಆದರೆ ನಾನು ಮಾತನಾಡುವ ಪರಿಸ್ಥಿತಿಯಲ್ಲಿ ಇರಲಿಲ್ಲ. ನನಗೆ ಸರಿಯಾಗಿ ಕಾಣಿಸುತ್ತಾ ಇರಲಿಲ್ಲ. ನನ್ನ ಬಟ್ಟೆಗೆ ಯಾವುದೇ ರಕ್ತ ಆಗಿರಲಿಲ್ಲ ಆದರೆ ಕಾಲು ಮಾತ್ರ ಪೆಟ್ಟಾಗಿತ್ತು ಚಾಸಾ-2 ರವರಿಗೆ ಬಟ್ಟೆ ಎಲ್ಲಾ ರಕ್ತ ಆಗಿತ್ತು. ಚಾಸಾ-2 ರವರ ರಕ್ತ ಆಗಿರುವ ಬಟ್ಟೆಯನ್ನು ಪೊಲೀಸರಿಗೆ ಕೊಟ್ಟಿರುವುದಿಲ್ಲ ಅದೇ ಬಟ್ಟೆಯಲ್ಲೇ ಹಾಸನ್ ಗೆ ಕರೆದುಕೊಂಡು ಹೋಗಿರುತ್ತಾರೆ. ಪೊಲೀಸರು ಆಸಪತ್ರೆಗೆ ಬಂದು ಅಪಘಾತ ಹೇಗಾಯಿತು ಎಂದು ನನ್ನನ್ನು ಕೇಳಿ ಅಪಘಾತ ಯಾರು ಮಾಡಿದರು ಎಂದು ನನಗೆ ಗೊತ್ತಿಲ್ಲ ಎಂದು ಹೇಳಿರುತ್ತೇನೆ ಆದರೆ ಟ್ರಾಕ್ಟರ್ನಿಂದ ಅಪಘಾತದ ಆಯಿತು ಎಂದು ಹೇಳಿರುತ್ತೇನೆ. ಪೊಲೀಸರು ನನ್ನ ಹೇಳಿಕೆಯನ್ನು ಆಸ್ಪತ್ರೆಯಲ್ಲಿ ತಗೊಂಡಿರುವುದಿಲ್ಲ ಆದರೆ ಬಂದು ನೋಡಿಕೊಂಡು ಹೋದರು. ನಮ್ಮ ಊರಿನವರಾದ ಲೋಕೇಶ್ ಚಾಸಾ-4 ರವರು 108 ಕ್ಕೆ ಫೋನ್ ಮಾಡಿ ಕರೆಸಿರುತ್ತಾರೆ. ಚಾಸಾ-4 ರವರು 10 ನಿಮಿಷ ಬಿಟ್ಟು ಬಂದಿರುತ್ತಾರೆ. ಅಲ್ಲಿ 10 ಜನ ಸೇರಿರುತ್ತಾರೆ. ಯಾರ್ಯಾರು ಬಂದರು ಎಂದು ನನಗೆ ಹೇಳಲು ಸಾಧ್ಯ ಇಲ್ಲ. ನಾನು ಸರ್ಕಾರಿ ತಿಪಟೂರು ಆಸ್ಪತ್ರೆಯಲ್ಲಿ 3 ಜನ ಒಳರೋಗಿಯಾಗಿ ದಾಖಲಾತಿ ಮತ್ತು ಬಿಡುಗಡೆಯಾದ ನಂತರ ಬುಕ್ಕಾಪಟ್ಟಣಕ್ಕೆ ಹೋಗಿ ಚಿಕಿತ್ಸೆಗೆ ಓಮಿನಿ ಕಾರಿನಲ್ಲಿ ಹೋಗಿರುತ್ತೇನೆ. ನನ್ನ ಅತ್ತೆ ಮಗನಾದ ಗಂಗಾಧರ್ ರವರು ಓಮಿನಿ ಕಾರನ್ನು ಓಡಿಸಿರುತ್ತಾರೆ. ಓಮಿನಿ ಕಾರು ನಂಬರ್ ನನಗೆ ಗೊತ್ತಿರುವುದಿಲ್ಲ. ನನಗೆ ಚಿಕಿತ್ಸೆಯನ್ನು ವೈದ್ಯರು ನೀಡಿರುತ್ತಾರೆ ಅವರ ಹೆಸರು ನನಗೆ ಈಗ ನೆನಪಿಲ್ಲ. ವೈದ್ಯರು ಮಂಡಿಯ ಮೇಲೆ ಮತ್ತುಕೆಳಗಡೆ ಊದಿಕೊಂಡಿತ್ತು ಮತ್ತು ಮೂಳೆ ತಿರುಗಿತ್ತು ಅದಕ್ಕೆ ಚಿಕಿತ್ಸೆಯನ್ನು ನೀಡಿರುತ್ತಾರೆ. ನನಗೆ ಎಕ್ಸ್ ರೇ ತೆಗೆದಿರುತ್ತಾರೆ. ಸರ್ಕಾರಿ ಆಸ್ಪತ್ರೆಯ ಜೆಂಟ್ಸ್ ಡಿಸ್ಚಾರ್ಜ ಮಾಡಿಕೊಂಡು ಮನೆಗೆ ಕರೆದುಕೊಂಡು ಹೋಗಿ ಎಂದು ಹೇಳಿರುತ್ತಾರೆ ಆದರೆ ನಾನು

ವಾಸಿಯಾಗಿಲ್ಲ. ಬುಕ್ಕಾಪಟ್ಟಣದಲ್ಲಿ ನಾನು ಉಳುಕು ಚಿಕಿತ್ಸೆಯನ್ನು ಪಡೆದಿರುತ್ತೇನೆ. ನಾನು ಉಳುಕು ಚಿಕಿತ್ಸೆಯನ್ನು ಪಡೆದುಕೊಂಡಿರುವುದಕ್ಕೆ ಯಾವುದೇ ದಾಖಲಾತಿಯನ್ನು ನಾನು ಪಡೆದು ಕೊಂಡಿರುವುದಿಲ್ಲ ಅದರಿಂದ ತನಿಖಾಧಿಕಾರಿಯವರಿಗೆ ಕೊಟ್ಟಿರುವುದಿಲ್ಲ. ದೂರನ್ನು ನಾನೇ ಹೇಳಿ ಬೆರಳಚ್ಚು ಮಾಡಿಸಿರುತ್ತೇನೆ. ಸಾಕ್ಷಿ ಮೊದಲು ನಾನೇ ಬರೆದಿದೀನಿ ಎಂದು ನುಡಿದಿರುತ್ತಾರೆ ತದನಂತರ ಟೈಪ್ ಮಾಡಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಪೊಲೀಸರು ದೂರನ್ನು ಕೊಟ್ಟ ನಂತರ ಕೇಸಿನ ಬಗ್ಗೆ ಕರೆದು ನನ್ನ ಹತ್ತಿರ ಮಾತನಾಡಿರುತ್ತಾರೆ. ಮಾತನಾಡಿರುವುದನ್ನು ಬಿಟ್ಟು ಬೇರೆ ಯಾವುದೇ ದಾಖಲೆ ಮಾಡಿಕೊಂಡಿಲ್ಲ. ನನ್ನ ವಿರುದ್ಧ ಚಾಸಾ-2 ರವರು ಪರಿಹಾರ ಅರ್ಜಿಯನ್ನು ಕೋರಿ ಅರ್ಜಿ ಹಾಕಿರುತ್ತಾರೆ ಎಂದರೆ ಸರಿ. ಅದೇ ರೀತಿ ನಾನು ಕೂಡ ಆರೋಪಿತರ ವಿರುದ್ಧ ಪರಿಹಾರ ಅರ್ಜಿಯನ್ನು ಹೂಡಿರುತ್ತೇನೆ ಎಂದರೆ ಸರಿ. ನಮ್ಮಿಬ್ಬರಿಗೂ ಒಬ್ಬರೇ ವಕೀಲರು ಎಂದರೆ ಸರಿ. ಆ ದಿನ ಯಾವುದೇ ಅಪಘಾತ ಆಗಿರುವುದಿಲ್ಲ ನಾನು ಮತ್ತು ಚಾಸಾ-2 ರವರು ಕುಡಿದು ದ್ವಿಚಕ್ರ ವಾಹನವನ್ನು ಓಡಿಸಿಕೊಂಡು ಬಂದು ಕೆಳಗಡೆ ಬಿದ್ದಿದ್ದುತ್ತೇವೆ ಎಂದರೆ ಸರಿಯಲ್ಲ ಆ ದಿನ ನಾನು ಚಾಸಾ-2 ಮತ್ತು ನಮ್ಮ ಇಬ್ಬರ ಜೊತೆ ಇನ್ನೊಬ್ಬ ವ್ಯಕ್ತಿಯಾದ ಚಾಸಾ-4 ರವರು ಒಂದೇ ದ್ವಿಚಕ್ರ ವಾಹನದಲ್ಲಿ ಬರುತ್ತಾ ಇದ್ದೆವು ಎಂದರೆ ಸರಿಯಲ್ಲ. ನಾವು 3 ಜನ ಒಂದೇ ದ್ವಿಚಕರ ವಾಹನದಲ್ಲಿ ಬಂದಿರುವುದಕ್ಕೆ ದೇವಸ್ಥಾನ, ಸ್ಕೂಲ್ ಮತ್ತು ಪೆಟ್ರೋಲ್ ಬಂಕ್ ನಲ್ಲಿರುವ ಸಿಸಿಟಿಯಲ್ಲಿ ದಾಖಲೆ ಆಗಿರುತ್ತದೆ ಎಂದರೆ ಸರಿಯಲ್ಲ. ನಾವು 3 ಜನ ತ್ರಿಬಲ್ ರೈಡಿಂಗ್ ಬಂದಿರುವುದಕ್ಕೆ ಮತ್ತು ನಾವು ಮಾತನಾಡಿರುವುದೆಲ್ಲಾ ಸಾರ್ವಜನಿಕರು ಅವರ ಮೊಬೈಲ್‌ಗಳಲ್ಲಿ ಚಿತ್ರೀಕರಣ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾವು ಡ್ರಿಂಕ್ಸ್ ಮಾಡಿರುವುದರಿಂದ ಸದರಿ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ನಿರ್ಲಕ್ಷತೆಯಿಂದ ಅಪಘಾತವಾಗಿರುತ್ತದೆ ಆರೋಪಿಗೂ ಈ ಅಪಘಾತಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆ ಆಗದೇ ಇದ್ದರೂ ಸಹ ಪರಿಹಾರಕ್ಕೋಸ್ಕರ ಸುಳ್ಳು ಸಾಕ್ಷ್ಯನುಡಿತಾ ಇದ್ದೀನಿ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.